<u>ಸಾಕ್ಷಿಯನ್ನು ದಿನಾಂಕಃ **24-07-2025** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ಶ್ರೀ.ಪಿ.ಜೆ.ಜಿ. ವಕೀಲರವರಿಂದಃ</u>

1. ನನಗೆ ವಾದಿಯ ಪರಿಚಯ ಇಲ್ಲ ಮತ್ತು ಮೊದಲಿನಿಂದಲೂ ಇರುವುದಿಲ್ಲ. ದಾವಾ ಅಸ್ತಿಯ ಸರ್ವೆ ನಂ 106 ಇದ್ದು ವಿಸ್ತೀರ್ಣ 1 ಎಕರೆ 74 ಸೆನ್ಸ ಇದ್ದು ಅದು ಕಲ್ಲಗುಡಿ ಗ್ರಾಮದಲ್ಲಿ ಇರುವುದು ಅಂದರೆ ಸಾಕ್ಷಿಯು ಯಾವುದೇ ಉತ್ತರ ವಹಿಸದೇ ಮೌನ ವಹಿಸುವರು. ದಾವಾ ಅಸ್ತಿಯ ಪೂರ್ವಕ್ಕೆ ಅಣಜಿಗೆರೆ ಹಾಲಪ್ಪನ ಜಮೀನು ಇದೆ ಅಂದರೆ ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ. ಅದೇ ರೀತಿ ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ ಯಾರ ಜಮೀನುಗಳು ಇವೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಪ್ರತಿವಾದ ಪತ್ರದಲ್ಲಿ ವಾದ ಪತ್ರದಲ್ಲಿರುವ ಚೆಕ್ಕು ಬಂದಿಗಳು ಸಮರ್ಪಕವಾಗಿರುವುದಿಲ್ಲವೆಂದು ಬರೆಸಿರುವುದಿಲ್ಲ. ವಾದ ಪತ್ರದಲ್ಲಿ ಕಾಣಿಸಿರುವ ಚೆಕ್ಕು ಬಂದಿಗಳ ನಡುವೆ ಈಗಲೂ ವಾದಿ ಸ್ವಾಧೀನದಲ್ಲಿದ್ದು ಸಾಗುವಳಿ ಮಾಡುತ್ತಿರುವರು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ತಂದೆ. 3 ನೇ ಪ್ರತಿವಾದಿ ನನ್ನ ಸಂಬಂದಿಕ. 4 ನೇ ಪ್ರತಿವಾದಿ ನನ್ನ ತಮ್ಮ. 4 ನೇ ಪ್ರತಿವಾದಿಯು ತನ್ನನ್ನು ಈ ಕೇಸಿನಲ್ಲಿ ಸೇರಿಸುವಂತೆ ಅರ್ಜಿ ಹಾಕಿದ್ದನು ಅಂದರೆ ಸರಿಯಲ್ಲ ಆ ಪ್ರಕಾರ ಅತನನ್ನು ಪಕ್ಷಗಾರನನ್ನಾಗಿ ಮಾಡಲಾಗಿದೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಿನಾಂಕ 20.09.1980 ರಂದು ದಾವಾ ಸ್ವತ್ತುನು ವಾದಿಯಗೆ ನೊಂದಾಯಿತ ಖರೀದಿ ಪತ್ರದ ಮುಖಾಂತರ 800 ರೂ ಮಾರಾಟ ಮಾಡಿರುವನು ಅಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವ ಪೂರ್ವದಲ್ಲಿ ವಾದಿ ನನ್ನ ತಂದೆಯಾದ 1 ನೇ ಪ್ರತಿವಾದಿಗೆ ನೊಟೀಸನ್ನು ನೀಡಿದ್ದರು ಅಂದರೆ ಸರಿಯಲ್ಲ.

2. ನನ್ನ ತಂದೆಯ ಹೆಬ್ಬೆಟ್ಟನ್ನು ಸುಳ್ಳಾಗಿ ಸೃಷ್ಟಿಸಿರುವರು ಎಂದು ನಾನು ವಾದಿಯ ವಿರುದ್ಧ ಯಾವುದೇ ಕ್ರಿಮಿನಲ ಕೇಸನ್ನು ದಾವಾ ಸಲ್ಲಿಸಿದ ನಂತರ ಈ ವರೆಗೆ ಹಾಕಿರುವುದಿಲ್ಲ. ನೊಟೀಸು ಕೊಟ್ಟ ನಂತರ ಕ್ರಿಮಿನಲ್ ಕೇಸು ದಾಖಲಿಸಲು ನಮಗೆ ತೊಂದರೆ ಇರಲಿಲ್ಲ. ವಾದಿಯು ಯಾವುದೇ ಖರೀದಿ ಪತ್ರವನ್ನು ಸೃಷ್ಟಿಸಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಆ ಕಾರಣ ನಾವು ಕ್ರಿಮಿನಲ್ ಕೇಸು ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ಸರ್ವೆ ನಂ 100 ಜಿ ಇದು ಯಾರಿಗೆ ಸೇರಿದ್ದು ಅಂದರೆ ನನಗೆ ಗೊತ್ತಿಲ್ಲು. ಆದು ಸಾವಿತ್ರಮ್ಮ ಗಂಡ ಕೆಂಚಪ್ಪನಿಗೆ ಸೇರಿದ್ದು ಅಂದರೆ ನನಗೆ ಗೊತ್ತಿಲ್ಲ. ದಾವಾ ಹಾಕುವ ಕಾಲಕ್ಕೆ ದಾವಾ ಅಸ್ತಿ 1 ನೇ ಪ್ರತಿವಾದಿ ಕರಿಯಪ್ಪನ ಹೆಸರಿಲ್ಲಿ ಇತ್ತು ಅಂದರೆ ಸರಿಯಲ್ಲ. 1 ನೇ

**ಸಾಕ್ಷಿಯ ಸಹಿ**

ಪ್ರತಿವಾದಿ ವಾದಿಗೆ ಬರೆದು ಕೊಟ್ಟಿರುವ ಖರೀದಿ ಪತ್ರದಲ್ಲಿ 106 ಎಂದು ಬರೆಯುವ ಬದಲು 100 ಜಿ ಎಂದು ತಪ್ಪಾಗಿ ಬರೆದುಕೊಟ್ಟಿರುವನು ಅಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಕಾಣಿಸಿರುವ ಚೆಕ್ಕು ಬಂದಿಗಳು ದಾವಾ ಸ್ವತ್ತಿನ ಚೆಕ್ಕು ಬಂದಿಗಳು ಅಂದರೆ ಸರಿಯಲ್ಲ.

3. ಹಾಲಪ್ಪನು ಅವಿದ್ಯಾವಂತನು ಇರುವನು ಅಂದರೆ ನನಗೆ ಗೊತ್ತಿಲ್ಲ. 2012 ರಲ್ಲಿ ಪಹಣಿ ತೆಗೆಪಿದು ನೋಡಿದಾಗ ತನ್ನ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂಬ ವಿಚಾರ ವಾದಿಗೆ ಗೊತ್ತಾಯಿತು ಅಂದೆರ ಸರಿಯಲ್ಲ. ಆಗ ಖರೀದಿ ಪತ್ರದಲ್ಲಿ ಸರ್ವೆ ನಂಬರನ್ನು ತಿದ್ದುಪಡಿ ಮಾಡಿಕೊಡುವಂತೆ ಹಾಲಪ್ಪನು ನನ್ನ ತಂದೆಯ ಬಳಿ ಮೌಕಿಕವಾಗಿ ಕೇಳಿಕೊಂಡನು ಅಂದರೆ ಸರಿಯಲ್ಲ. ತಿದ್ದುಪಡಿ ಮಾಡಿಕೊಡದ ಕಾರಣ ನೊಟೀಸನ್ನು ನೀಡಿರುವರು ಅಂದರೆ ಸರಿಯಲ್ಲ. ಸರ್ವೆ ನಂಬರು ತಪ್ಪಾದ ವಿಚಾರ ನನ್ನ ತಂದೆಗೆ ಗೊತ್ತಿದ್ದ ಕಾರಣ ಉದ್ದೇಶಪೂರ್ವಕವಾಗಿ ನೊಟೀಸನ್ನು ನಿರಾಕರಿಸಿರುವರು ಅಂದರೆ ಸರಿಯಲ್ಲ. ಆ ರೀತಿ ವಾದಿಯು ನನ್ನ ತಂದೆಗೆ ನೊಟೀಸನ್ನು ನೀಡಿದ ನಂತರ ನಾನು ಈ ನ್ಯಾಯಾಲಯದಲ್ಲಿ ನನ್ನ ತಂದೆಯ ಮತ್ತು ತಮ್ಮನ ವಿರುದ್ಧ OS No. 159/2012 ರಂತೆ ಘೋಷಣಾತ್ಮಕ ದಾವೆಯನ್ನು ದಾವಾ ಅಸ್ತಿಗೆ ಸಂಬಂದಿಂಸಿದಂತೆ ದಾಖಲೆ ಮಾಡಿರುವೆನು ಅಂದರೆ ಸರಿಯಲ್ಲ. ಆ ಕೇಸು ದಿನಾಂಕ 20.06.2013 ರಂದು ವಜಾ ಆಗಿದೆ ಅಂದರೆ ಸರಿಯಲ್ಲ.

4. 1 ನೇ ಪ್ರತಿವಾದಿಯು ಸಲ್ಲಿಸಿರುವ ತಕರಾರಿನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಹಾಕಿರುವ ತಕರಾರಿನಲ್ಲಿರುವ ವಿಚಾರಗಳು ನನಗೆ ಗೊತ್ತಿದೆ ಎಂದು ಬರೆಸಲಾಗಿದೆ ಅಂದರೆ ಸರಿಯಲ್ಲ. ನನ್ನ ತಂದೆ ಮೇಲೆ ಹೇಳಿದ OS No. 159/2012 ರ ವಿಚಾರವನ್ನು ಈ ಕೇಸಿನ ತಕರಾರಿನಲ್ಲಿ ಬರೆಸಿರುವರು ಅಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ನನ್ನ ಹೆಸರಿಗೆ ಹಕ್ಕು ಬಿಡುಗಡೆ ಪತ್ರವನ್ನು ಮಾಡಿರುವರು ಅಂದರೆ ಸರಿ. ಹಕ್ಕು ಬಿಡುಗಡೆ ಪತ್ರ ಆಗುವ ಪೂರ್ವದಲ್ಲಿ ನಾನು, ನನ್ನ ತಂದೆ ಹಾಗೂ ನನ್ನ ತಮ್ಮ ಮನೆತನದ ಅಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಕೇಸು ಚಾಲ್ತಿಯಲ್ಲಿದ್ದಾಗ ನಾನು 3 ನೇ ಪ್ರತಿವಾದಿಗೆ ಒಂದು ಖರೀದಿ ಪತ್ರವನ್ನು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಬರದುಕೊಟ್ಟದ್ದೇನೆ ಅಂದರೆ ಸರಿ.

5. 3 ನೇ ಪ್ರತಿವಾದಿ 4 ನೇ ಪ್ರತಿವಾದಿಯ ಹೆಸರಿಗೆ ಮತ್ತೊಂದು ದಿನಾಂಕ 11.06.2018 ರಂದು ನೊಂದಾಯಿತ ಖರೀದಿ ಪತ್ರವನ್ನು ದಾವಾ ಅಸ್ತಿಗೆ

ಸಂಬಂದಿಸಿದಂತೆ ಬರೆದುಕೊಟ್ಟಿರುವರು ಅಂದರೆ ಸರಿಯಲ್ಲ. ನಾನು ಈ ಕೇಸಿನಲ್ಲಿ ಪ್ರತ್ಯೇಕ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಗಳಾದ ನಾವು ವಾದಿಯ ಹಕ್ಕನ್ನು ನಷ್ಟಗೊಳಿಸಲು ಉದ್ದೇಶ ಪೂರ್ವಕವಾಗಿ ಖರೀದಿ ಪತ್ರಗಳನ್ನು ಹಾಗೂ ಹಕು ಬಿಡುಗಡೆ ಪತ್ರಗಳನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ.

6. ನನ್ನ ಅಜ್ಜನ ಹೆಸರು ಹನುಮಂತಪ್ಪ ಎಂದಿರುವುದು. ಹನಮಂತಪ್ಪ ತಂದೆ ರಾಮಪ್ಪ ಇವರು ನನ್ನ ಮುತ್ತಜ್ಜ. ನನ್ನ ಅಜ್ಜನಾದ ಹನುಮಂತಪ್ಪನು ನಿಪಿ 2 ದಾಖಲೆಗೆ ಹೆಬ್ಬಟ್ಟಿನ ಸಹಿಯನ್ನು ಹಾಕಿರುವರು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಸಹ ನಿಪಿ 2 ರಲ್ಲಿ ಹೆಬ್ಬಟ್ಟಿನ ಸಹಿಯನ್ನು ಹಾಕಿರುವರು ಅಂದರೆ ಸರಿಯಲ್ಲ. ಈಗಲೂ ನನ್ನ ತಂದೆಗೆ ಸಾಕ್ಷಿ ಹೇಳುವ ಪರಿಜ್ಞಾನ ಇರುತ್ತದೆ ಅಂದರೆ ಸರಿಯಲ್ಲ. ನನ್ನ ತಂದೆ ಈಗ ನ್ಯಾಯಾಲಯದ ಮುಂದೆ ಬಂದು ಹೆಬ್ಬಟ್ಟಿನ ಸಹಿ ಕೊಡಲು ಸಮರ್ಥನಿರುವುದಿಲ್ಲ. 4 ನೇ ಪ್ರತಿವಾದಿ ನನ್ನ ಜೊತೆ ವಾಸ ಇರುವನು. ನಾವು ಅನ್ಯೂನ್ಯವಾಗಿದ್ದೇವೆ ಅಂದರೆ ಸರಿ.ಹಾಲಪ್ಪನ ಹೆಸರಿಗೆ ದಾವಾ ಅಸ್ತಿ ಮುಟೇಶನ್ ಆಗದೇ ಇರುವುದನ್ನು ದುರುಪಯೊೀಗ ಪಡಿಸಿಕೊಂಡು ನಾವು ಮೇಲೆ ಹೇಳಿದ ಖರೀದಿ ಪತ್ರ ಮತ್ತು ಹಕ್ಕು ಬಿಡಗುಡೆ ಪತ್ರಗಳನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ನಾವು ದಿನಾಂಕ 29.09.2012 ರಂದು ನಕಲಿ ದಾಖಲೆಯ ದಾಖಲೆಗಳ ಅಧಾರದ ಮೇಲೆ ವಾದಿಯ ಸ್ವಾಧೀನ ಅನುಭವಕ್ಕೆ ದಕ್ಕೆ ತಂದಿದ್ದೇವೆ ಅಂದರೆ ಸರಿಯಲ್ಲ.

7. ನಾನು ದಾವಾ ಅಸ್ತಿಗೆ ಕಂದಾಯ ಪಾವತಿ ಮಾಡಿದ್ದೇನೆ. ನಾನು ಯಾವುದೇ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

24-07-2025

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ

**ಸಾಕ್ಷಿಯ ಸಹಿ**